**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10007/2023**

**ಚಾಸಾ ಃ 13**
**ಪ್ರಾಸಾ ಃ 11**

| | | |
|---|---|---|
| **ಹೆಸರು** | ಃ | ಪ್ರಭು |
| **ತಂದೆಯ ಹೆಸರು** | ಃ | ಬೈಯಣ್ಣ |
| **ವಯಸ್ಸು** | ಃ | 33 **ವರ್ಷ** |
| **ವೃತ್ತಿ** | ಃ | ಆಟೋ ಡ್ರೈವರ್ |
| **ವಾಸ** | ಃ | ರಾಜುನುಕುಂಟೆ |

**ಈ ದಿನ ದಿನಾಂಕಃ 04.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು ಇರುತ್ತದೆ. ಸದರಿ ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿ-24 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

2. ಸುಮಾರು 3 ವರ್ಷಗಳ ಹಿಂದೆ ನಾನು ರಾಜಾನುಕುಂಟೆ ಆಟೋ ಸ್ಟಾಂಡ್ ನಲ್ಲಿದಾಗ ರಾಜಾನುಕುಂಟೆ ಠಾಣಾ ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ನೋಟಿಸು ಜಾರಿಗೊಳಿಸಿ ನಂತರ ನನ್ನನ್ನು ಬೆಂಗಳೂರಿನ ವಸಂತ್ ನಗದರಲ್ಲಿರುವ ಎಸ್ ಪಿ ಆಫೀಸ್ ನ ಸೈಬರ್ ಕ್ರೈಮ್ ಬ್ರಾಂಚ್ ಗೆ ಕರೆದುಕೊಂಡು ಹೋಗಿ ಅಲ್ಲಿ 2 ಮೊಬೈಲ್ನಲ್ಲಿರುವ ದತ್ತಾಂಶಗಳನ್ನು ರಿಟ್ರೀವ್ ಮಾಡಿ ಪ್ರಿಂಟ್ ತೆಗೆದು ನಮ್ಮ ಪೋಟೋ ತೆಗೆದು ಮಹಾಜರ್ ಬರೆದು ಮೇಲೆ ಹೇಳಿದ ಸಹಿಯನ್ನು ಪಡೆದುಕೊಂಡಿರುತ್ತಾರೆ.

3. ಸದರಿ ಮೊಬೈಲ್ ಗಳನ್ನು ಈಗ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುದ್ದೆ ಮಾಲು 14 ಮತ್ತು 15 ಎಂದು ಗುರುತಿಸಲಾಗಿರುತ್ತದೆ. ಅಲ್ಲಿ ತೆಗೆದ ಪೋಟೋಗಳನ್ನು ಈಗ

ನೋಡಿ ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-25 ಮತ್ತು 26 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಾನು, ಕೃಷ್ಣಪ್ಪ ಮತ್ತು ಪೊಲೀಸರು ಇದ್ದೆವು. ನನಗೆ ನೀಡಿದ ನೋಟಿಸ್ ನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ-27 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರರುತಿಸಿದ್ದರಿಂದ ನಿಪಿ-27(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಮಾಡಿದಾಗ ಮಧ್ಯಾಹ್ನ ಆಗಿತ್ತು.

**ಪಾಟೀ ಸವಾಲು ಆರೋಪಿತರ ಪರ ವಕೀಲರು ಗೈರುಹಾಜರಿರುತ್ತಾರೆ ಯಾರು ಪ್ರತಿನಿಧಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ